**ಅಸಲು ದಾವ ಸಂಖ್ಯೆಃ 294/2013**

**ಪಿ .ಡಬ್ಲೂ -1**

ದಿಃ 14.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್ ಬಿ ಪಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/-ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ನಾನು 4 ನೇ ತರಗತಿಯವರೆಗೆ ಶಾಲಾಭ್ಯಾಸ ಮಾಡಿರುತ್ತೇನೆ.

ಪ್ರಶ್ನೆಃ ನಿಮ್ಮ ಹೆಸರು ಕಲ್ಲಪ್ಪಾ ಶ್ರೀಪತಿ ಪಾಟೀಲ ಅಲ್ಲವೇ ?

ಉತ್ತರಃ ನನ್ನ ಹೆಸರು ಕಲ್ಲಪ್ಪಾ ಶ್ರೀಪತಿ ಪಾಟೀಲ ಉರ್ಫ ಕುಲಂ ಆಗಿರುತ್ತದೆ.

2. ನಾನು ನನ್ನ ದಾವಾ ಪತ್ರದಲ್ಲಿ ನನ್ನ ಹೆಸರು ಕಲ್ಲಪ್ಪಾ ಶ್ರೀಪತಿ ಪಾಟೀಲ ಉರ್ಫ ಕುಲಂ ಎಂದು ಹೇಳಿಲ್ಲ ಎಂದರೆ ಸರಿ. ನಾನು ನನ್ನ ಸಹಿಯನ್ನು ಮಾಡುವಾಗ ಕಲ್ಲಪ್ಪಾ ಶ್ರೀಪತಿ ಪಾಟೀಲ ಎಂದು ಮಾತ್ರ ಮಾಡುತ್ತೇನೆ ಎಂದರೆ ಸರಿ. ನಾನು ಕಂಗ್ರಾಳಿಯಲ್ಲಿ ಸಧ್ಯ ವಾಸಿಸುತ್ತಿದ್ದೇನೆ ಎಂದರೆ ನಾನು ಎರಡು ಕಡೆ ವಾಸಿಸುತ್ತೇನೆ. ನಾನು ಕಂಗ್ರಾಳಿಯನ್ನು

ಹೊರತುಪಡಿಸಿ ಬಾಕನೂರು ನಲ್ಲಿ ಸಹಿ ವಾಸಿಸುತ್ತೇನೆ. ನಾನು ಬಾಕನೂರಿನಲ್ಲಿ ವಾಸಿಸುತ್ತೇನೆ ಎಂದು ತೋರಿಸಲು ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಕಂಗ್ರಾಳಿ ಹಾಗೂ ಬಾಕನೂರ ಎರಡು ಕಡೆ ವಾಸಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿ ನಂಬರ 2 ಮತ್ತು ಶ್ರೀಪತಿ ಕುಲಂ ರವರ ನಡುವೆ ವಿವಾಹವಾಗಿಲ್ಲ ಎಂದರೆ ಸರಿಯಲ್ಲ. ನಾನು ವಾದಿ ನಂಬರ 2 ರವರು ಮತ್ತು ಶ್ರೀಪತಿ ಕುಲಂ ರವರ ನಡುವೆ ವಿವಾಹವಾಗಿದೆ ಎಂದು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಮುಂದುವರೆದು ಹೇಳುತ್ತೇನೆ 100 ವರ್ಷದ ಹಿಂದಿನ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ. ಶ್ರೀಪತಿ ಕುಲಂ ಹಾಗೂ ವಾದಿ ನಂಬರ 2 ರವರ ನಡುವೆ ಮದುವೆಯಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀಪತಿ ಕುಲಂ ಮತ್ತು ವಾದಿ ನಂಬರ 2 ರವರ ನಡುವೆ ಮದುವೆಯಾಗಿದೆ ಎಂದು ತೋರಿಸಲು ಫೋಟೋವನ್ನು ಹಾಜರುಪಡಿಸಿಲ್ಲ ಕಾರಣ ಆ ಕುರಿತಾಗಿ ಫೋಟೋಗಳಿರುವುದಿಲ್ಲ. ಶ್ರೀಪತಿ ಕುಲಂ ಹಾಗೂ ವಾದಿ ನಂಬರ 2 ರವರ ನಡುವೆ ಮದುವೆಯಾಗಿದ್ದರೆ ಜಂಟಿ ಫೋಟೋ ಇರುತ್ತಿತ್ತು ಎಂದರೆ ಶ್ರೀಪತಿ ಕುಲಂ ಹಾಗೂ ವಾದಿನಂಬರ 2 ರವರ ಮದುವೆಯಾಗಿರುತ್ತದೆ. ಶ್ರೀಪತಿ ಕುಲಂ ಹಾಗೂ ವಾದಿ ನಂಬರ 2 ರವರ ಮದುವೆಯಾಗದೇ ಇರುವುದರಿಂದ ನಾನು ಜಂಟಿ ಫೋಟೋ ಹಾಜರುಪಡಿಸಿರುವುದಿಲ್ಲ.

4. ದಾವಾ ಆಸ್ತಿಯ  ಸರ್ವೇ ನಂಬರ 4/1 ಮತ್ತು 4/2 ಆಗಿರುತ್ತದೆ. ದಾವಾ ಆಸ್ತಿಯನ್ನು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದು ಸುಳ್ಳು ಬರೆದಿದ್ದೇನೆ ಎಂದರೆ ಸರಿಯಲ್ಲ.

ಶ್ರೀಪತಿ ಕುಲಂ ರವರು ದಾವಾ ಆಸ್ತಿಯನ್ನು ಮಾರಾಟ ಮಾಡಿದ ಕುರಿತಾಗಿ ನನಗೆ ಮಾಹಿತಿ ಇಲ್ಲ. ಪ್ರತಿವಾದಿ ನಂಬರ 2 ರಿಂದ 11 ರವರು ದಾವಾ ಆಸ್ತಿಯನ್ನು ಖರೀದಿಸಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿಯವರು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಶ್ರೀಪತಿ ಕುಲಂ ರವರು ಅಧಿಭೋಗನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಸ್ವತಃ ಹೇಳುತ್ತೇನೆ ನನ್ನ ಅಜ್ಜ ಅಧಿಭೋಗನಾತೆಯಿಂದ ಸಾಗುವಳಿ ಮಾಡುತ್ತಿದ್ದರು. ನನ್ನ ಅಜ್ಜ ಅಧಿಭೋಗನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀಪತಿ ಕುಲಂ ರವರು ಭೂನ್ಯಾಯಮಂಡಳಿಯಲ್ಲಿ ಫಾರಂ ನಂಬರ 7 ನ್ನು ತುಂಬಿದ್ದರು. ನಾನು ಸ್ವತಃ ಹೇಳುತ್ತೇನೆ ಕುಟುಂಬ ನಾತೆಯಿಂದ ಸದರಿ ಫಾರಂ ನಂಬರ 7 ನ್ನು ತುಂಬಿದ್ದರು.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**